(ಅ) ಈ ವಿಷಯದ ಬಗ್ಗೆ ಮಾಹಿತಿ ಇರುವುದಿಲ್ಲ.

(ಇ) ಅವ್ಯವಹಾರ ನಡೆದ ನಿರ್ದಿಷ್ಟ ಪ್ರಕಟಣೆಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

(ಈ) ಇದು ಉದ್ಭವಿಸುವುದಿಲ್ಲ. ಒಂದು ವೇಳೆ ಅವ್ಯವಹಾರ ನಡೆದಿದ್ದಲ್ಲಿ ಹಾಗೂ ಅಧಿಕಾರಿಗಳ ವಿರುದ್ಧ ಆಧಾರಗಳು ದೊರೆತರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಉ) ಸೇಡಂ ಉಪ ವಿಭಾಗದಲ್ಲಿ ಈ ಸದ್ಯ ಯಾವುದೇ ಸಾಮಗ್ರಿಗಳ ಕೊರತೆ ಇರುವುದಿಲ್ಲ.

## ಸೇಡಂ ಕ್ಷೇತ್ರದಲ್ಲಿ ನ್ಯಾಯಬೆಲೆ ಅಂಗಡಿಗಳು

1788 (2534) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; ಈ ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯ ಸರಬರಾಜು ಮಾಡುವ ವೇಳೆಯಲ್ಲಿ ಸರಬರಾಜು ಮಾಡುವವರು ಮೊದಲು ಪ್ರತಿ ಕ್ವಿಂಟಾಲಿಗೆ ರೂ. 2-00 ರಂತೆ ಪಡೆಯುತ್ತಿರುವುದು ಈಗ ಪ್ರತಿ ಕ್ವಿಂಟಾಲಿಗೆ ರೂ. 4-00 ಗಳಿಗೆ ಪಡೆದು ಅವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಬಗ್ಗೆ ಅವ್ಯವಹಾರ ಆಗುತ್ತಿದ್ದರೆ ಇವರ ಮೇಲೆ ಕೈಗೊಳ್ಳುವ ಕ್ರಮವೇನು; ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶೀ ಡಿ.ಬಿ. ಇನಾಂದಾರ್(ಆಹಾರ, ನಾಗರೀಕ ಸರಬರಾಜು ರಾಜ್ಯ ಸಚಿವರು)

(ಅ) 1. ಸೇಡಂ ತಾಲ್ಲೂಕಿನಲ್ಲಿ 98 ನ್ಯಾಯಬೆಲೆ ಅಂಗಡಿಗಳು ಕೆಲಸ ನಿರ್ವಹಿಸುತ್ತಿವೆ.

2. ಇಲ್ಲ.

3. ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಆಹಾರಧಾನ್ಯಗಳನ್ನು ಸರ್ಕಾರದ ವೆಚ್ಚದಲ್ಲಿ ನ್ಯಾಯಬೆಲೆ ಅಂಗಡಿಗೆ ಸಾಗಾಣಿಕೆ ಮಾಡಿ ಒದಗಿಸಲಾಗುತ್ತಿದೆ.

(ಆ) ಉದ್ಭವಿಸುವುದಿಲ್ಲ.

## ಧಾರವಾಡ ಮತಕ್ಷೇತ್ರದಲ್ಲಿ ಹಂಚಲಾದ ಹಸಿರು, ಕೇಸರಿ ಇತರ ಕಾರ್ಡುಗಳ ಬಗ್ಗೆ

1790 (2273) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡ ವಿಧಾನ ಸಭೆಯ ಮತಕ್ಷೇತ್ರದಲ್ಲಿ ಹಂಚಲಾದ ಹಸಿರು ಕಚಿ ಕೇಸರಿ ಮತ್ತು ಇತರ ಕಾರ್ಡುಗಳ ಸಂಖ್ಯೆ ಎಷ್ಟು;

(ಆ) ಸದರಿ ಕ್ಷೇತ್ರದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; ಅವು ಯಾವುವು; ಪ್ರತಿಯೊಂದು ನ್ಯಾಯ ಬೆಲೆಯ ಅಂಗಡಿಗೆ ಒದಗಿಸಲಾದ ಪಡಿತರ ಚೀಟಿ ಸಂಖ್ಯೆ ಎಷ್ಟು; ಅಂಗಡಿಗಳ ಹೆಸರು, ವಿವರ ಹಾಗೂ ಪ್ರತಿಯೊಂದು ಕಡೆಯ ಯಾವತ್ತೂ ಕಾರ್ಡುಗಳ ವಿವರವಾದ ಸಂಖ್ಯೆ ನೀಡುವಿರಾ;

(ಇ) ಸೀಮೆಎಣ್ಣೆಯನ್ನು ಯಾವ ಯಾವ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸಲಾಗುವುದು?

ಶ್ರೀ ಡಿ.ಬಿ. ಇನಾಂದಾರ್(ಆಹಾರ, ನಾಗರೀಕ ಸರಬರಾಜು ರಾಜ್ಯ ಸಚಿವರು)

(ಅ) ಧಾರವಾಡ ವಿಧಾನ ಸಭಾ ಕ್ಷೇತ್ರದಲ್ಲಿ ದಿನಾಂಕ 31-3-2000 ದ ಅಂತ್ಯಕ್ಕೆ ಈ ಕೆಳಕಂಡಂತೆ ಹಸಿರು ಕೇಸರಿ ಹಾಗೂ ಇತರ ಕಾರ್ಡುಗಳನ್ನು ನೀಡಲಾಗಿದೆ.

| | |
|---|---|
| 1. ಹಸಿರು ಕಾರ್ಡುಗಳು | 4789 |
| 2. ಕೇಸರಿ ಕಾರ್ಡುಗಳು | - |
| 3. ಫೋಟೋ ಕಾರ್ಡುಗಳು | 47423 |
| ಒಟ್ಟು | 52212 |

(ಆ) ಈ ಕ್ಷೇತ್ರದಲ್ಲಿ ಒಟ್ಟು 90 ನ್ಯಾಯಬೆಲೆ ಅಂಗಡಿಗಳು ಇರುತ್ತವೆ. ಪ್ರತಿಯೊಂದು ನ್ಯಾಯಬೆಲೆ ಅಂಗಡಿಯ ಹೆಸರು ಹಾಗೂ ಒದಗಿಸಲಾದ ಕಾರ್ಡುಗಳ ವಿವರಗಳು ಹಾಗೂ ಸೀಮೆಎಣ್ಣೆಯನ್ನು ವಿತರಿಸುವ ನ್ಯಾಯಬೆಲೆ ಅಂಗಡಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಇ) ಪ್ರಶ್ನೆ (ಅ) ಗೆ ಕೊಟ್ಟಿರುವ ಅನುಬಂಧದಲ್ಲಿರುವ ಅಂಗಡಿಗಳಿಂದ ಸೀಮೆಎಣ್ಣೆಯನ್ನು ಸಹ ವಿತರಿಸಲಾಗುತ್ತಿದೆ.